# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 348
2. ಸದಸ್ಯರ ಹೆಸರು : ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾಗಿದ್ದ ದಿನಾಂಕ : 07.12.2023
4. ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಮಾಜಿ ಸೈನಿಕರ ಮೀಸಲಾತಿ ಅಡಿಯಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗೆ ನೇಮಕಗೊಂಡ ಸಿಬ್ಬಂದಿಗಳಿಗೆ ವೇತನ ಸಂರಕ್ಷಣೆ ಒದಗಿಸಿ ವೇತನ ನಿಗದಿಪಡಿಸಲು ತುಟ್ಟಿಭತ್ಯೆಯನ್ನು (ಡಿ.ಎ) ಬಿಟ್ಟುಕೊಡುವುದು ಕಡ್ಡಾಯವೇ; ಹಾಗಿದ್ದಲ್ಲಿ ಸರ್ಕಾರದ ಆದೇಶದ ಪ್ರತಿಯನ್ನು ನೀಡುವುದು; | ಮಾಜಿ ಸೈನಿಕರ ಮೀಸಲಾತಿ ಅಡಿಯಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗೆ ನೇಮಕಗೊಂಡ ಸಿಬ್ಬಂದಿಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ 41-ಸಿ ರನ್ವಯ ವೇತನ ಸಂರಕ್ಷಣೆ ಒದಗಿಸಿ ವೇತನ ನಿಗದಿಪಡಿಸಲು ಕೇಂದ್ರ ಸರ್ಕಾರದ ಸೇವೆಗೆ ಪಡೆಯಬಹುದಾದ ಪಿಂಚಣಿ ಮೇಲಿನ ತುಟ್ಟಿಭತ್ಯೆಯನ್ನು ಬಿಟ್ಟುಕೊಡುವ ಬಗ್ಗೆ ಉಲ್ಲೇಖವಿರುವುದಿಲ್ಲ.<br><br>ದಿನಾಂಕ: 02.07.1999 ರ ಭಾರತ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ 45/73/97/P&PW(G) ರೀತ್ಯಾ ರಾಜ್ಯ ಸರ್ಕಾರವೂ ಒಳಗೊಂಡಂತೆ ಇತರ ನಿಗಮ ಮಂಡಳಿ ಇತ್ಯಾದಿಗಳಲ್ಲಿ ಪುನರ್ ನೇಮಕಗೊಂಡು ಆ ಹುದ್ದೆಯಲ್ಲಿನ ವೇತನ ಶ್ರೇಣಿಯಲ್ಲಿ ಕನಿಷ್ಠ ವೇತನ ಹಂತಕ್ಕೆ ನಿಗದಿಯಾಗುವ ಪ್ರಕರಣಗಳಲ್ಲಿ ಮಾತ್ರ ಕೇಂದ್ರ ಸರ್ಕಾರದ ಪಡೆಯಬಹುದಾದ ಪಿಂಚಣಿ ಮೇಲಿನ ತುಟ್ಟಿಭತ್ಯೆ ಬಿಡುಗಡೆಗೆ ದಿನಾಂಕ: 18.07.1997 ರಿಂದ ಜಾರಿಗೆ ಬರುವಂತೆ ಅವಕಾಶವನ್ನು ಕಲ್ಪಿಸಿರುವುದಾಗಿದೆ. ಕನಿಷ್ಠ ಹಂತವನ್ನು ಮೀರಿ ವೇತನ ನಿಗದಿಯನ್ನು ಪರಿಗಣಿಸುವ ಸಂದರ್ಭಗಳಲ್ಲಿ ಮಿಲಿಟರಿ ಪಿಂಚಣಿ ಮೇಲಿನ ತುಟ್ಟಿಭತ್ಯೆಯ ಪಾವತಿಗೆ ಅವಕಾಶಗಳಿರುವುದಿಲ್ಲ. |
| ಆ. | ಮಾಜಿ ಸೈನಿಕರು ವೇತನ ನಿಗದಿಗಾಗಿ ತುಟ್ಟಿಭತ್ಯೆಯನ್ನು ಬಿಟ್ಟುಕೊಡಬೇಕೆಂಬ ಆದೇಶ ಎಂದಿನಿಂದ ಜಾರಿಯಲ್ಲಿದೆ; ತುಟ್ಟಿಭತ್ಯೆಯನ್ನು ಬಿಟ್ಟುಕೊಡದೇ ವೇತನ ನಿಗದಿಪಡಿಸಲಾದ ಮಾಜಿ ಸೈನಿಕರ ಸಂಖ್ಯೆ ಎಷ್ಟು; | ಕೇಂದ್ರ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:45/73/P&PW(G) Dated: 02.07.1999 ರ ಪ್ರಕಾರ ಈ ಆದೇಶವು ದಿನಾಂಕ: 18.07.1997 ರಿಂದ ಜಾರಿಗೆ ಬಂದಿರುತ್ತದೆ.<br>ಕೆ.ಸಿ.ಎಸ್. ನಿಯಮ 41 (ಸಿ) (3) ರನ್ವಯ ಮಿಲಿಟರಿ ಸೇವೆಯಲ್ಲಿ ಕೊನೆಯ ಸಲ ಪಡೆದುಕೊಂಡ ವೇತನವು ಆತನು ನೇಮಕಗೊಂಡ ಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನಕ್ಕಿಂತ ಕಡಿಮೆ ಇರುವಲ್ಲಿ ಆತನ ವೇತನವನ್ನು ಕನಿಷ್ಠ ಹಂತಕ್ಕೆ ನಿಗದಿಪಡಿಸಬೇಕಾಗಿರುತ್ತದೆ. ಅದರಂತೆ, ಇಲಾಖೆಯಲ್ಲಿ ಒಟ್ಟು 1050 ಸಿಬ್ಬಂದಿಗಳು ತಾವು ನೇಮಕಗೊಂಡ ಹುದ್ದೆಯ ಕಾಲಿಕ ವೇತನ ಶ್ರೇಣಿಯ ಕನಿಷ್ಠ ಹಂತದ ವೇತನಕ್ಕೆ ಮಾತ್ರ ಅರ್ಹರಿದ್ದು, ಅವರಿಗೆ ಕನಿಷ್ಠ ವೇತನವನ್ನು ನಿಗದಿಪಡಿಸಲಾಗಿರುತ್ತದೆ. |
| ಇ. | ಸೈನಿಕ ಸೇವೆಯಿಂದ ನಿವೃತ್ತರಾಗಿ ಸರ್ಕಾರದ ಪೊಲೀಸ್ ಇಲಾಖೆಗೆ ನೇಮಕಗೊಂಡ ಪ್ರಕರಣಗಳಲ್ಲಿ ಸಿಬ್ಬಂದಿಗಳನ್ನು Employee ಅಥವಾ Re-Empolyee ಎಂದು | ನಿವೃತ್ತಿ ವಯಸ್ಸಿಗಿಂತ ಮೊದಲು ಮಿಲಿಟರಿ ಸೇವೆಯಿಂದ ಬಿಡುಗಡೆ ಹೊಂದಿದಂತ ಕಿರಿಯ ಕಮೀಷನ್ಡ್ ಅಧಿಕಾರಿ ಅಥವಾ ಅದಕ್ಕಿಂತ ಕೆಳಗಿನ ದರ್ಜೆಯ ಮಿಲಿಟರಿ ಅಧಿಕಾರಿಯು ರಾಜ್ಯ ಸಿವಿಲ್ ಸೇವೆಯಲ್ಲಿನ ಹುದ್ದೆಗೆ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರಲ್ಲಿನ ಷರತ್ತುಗಳ ಪೂರ್ವಕಗೊಳಪಟ್ಟು ನೇಮಕ ಹೊಂದುವಲ್ಲಿ ಅವಕಾಶವಿದೆ. ಈ ನೇಮಕಾತಿಗಳನ್ನು |

| | | |
|---|---|---|
| | ಪರಿಗಣಿಸಲಾಗುವುದೇ: (ಆದೇಶದ ಪ್ರತಿಯನ್ನು ನೀಡುವುದು) | ನೇರ ನೇಮಕಾತಿಗಳೆಂದು ಪರಿಗಣಿಸಲಾಗುತ್ತದೆ. |
| ಈ. | ರಾಜ್ಯದ ಪೊಲೀಸ್ ಇಲಾಖೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಮಾಜಿ ಸೈನಿಕರ ಪೈಕಿ ಎಷ್ಟು ಮಂದಿಗೆ ವೇತನ ರಕ್ಷಣೆ ಒದಗಿಸಿ ವೇತನ ನಿಗದಿಪಡಿಸಲಾಗಿದೆ. ಇವರಲ್ಲಿ ತುಟ್ಟಿಭತ್ಯೆ ಬಿಟ್ಟುಕೊಟ್ಟವರು ಮತ್ತು ಬಿಟ್ಟುಕೊಡಲು ಒಪ್ಪಿಗೆ ಸೂಚಿಸಿರುವವರ ಸಂಖ್ಯೆ ಎಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದ ಪೊಲೀಸ್ ಇಲಾಖೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಮಾಜಿ ಸೈನಿಕರ ಪೈಕಿ ಒಟ್ಟು 678 ಸಿಬ್ಬಂದಿಗಳಿಗೆ ಕೆ.ಸಿ.ಎಸ್. ನಿಯಮ 41 (ಸಿ) ರಡಿಯಲ್ಲಿ ವೇತನ ಸಂರಕ್ಷಣೆ ಒದಗಿಸಿ ವೇತನ ನಿಗದಿಪಡಿಸಲಾಗಿದೆ. ಅದರಲ್ಲಿ 246 ಸಿಬ್ಬಂದಿಗಳು ಈಗಾಗಲೇ ಈ ಹಿಂದಿನ ಮಿಲಿಟರಿ ಸೇವೆಯಲ್ಲಿನ ಪಿಂಚಣಿ ಮೇಲಿನ ತುಟ್ಟಿ ಭತ್ಯೆಯನ್ನು ಬಿಟ್ಟುಕೊಟ್ಟಿರುತ್ತಾರೆ ಹಾಗೂ 432 ಸಿಬ್ಬಂದಿಗಳು ತುಟ್ಟಿಭತ್ಯೆ ಬಿಟ್ಟುಕೊಡಲು ಒಪ್ಪಿಗೆಯನ್ನು ಸೂಚಿಸಿರುತ್ತಾರೆ. (ಈ ಕುರಿತು ಪಿಂಚಣಿ ವಿತರಣಾ ಪ್ರಾಧಿಕಾರ ಕ್ರಮ ಜರುಗಿಸಬೇಕಾಗಿರುತ್ತದೆ) ಘಟಕವಾರು ಮಾಹಿತಿಯನ್ನು ಅನುಬಂಧ-ಎ ರಲ್ಲಿ ಸಲ್ಲಿಸಲಾಗಿದೆ. |
| ಉ. | ರಾಜ್ಯದ ಪೊಲೀಸ್ ಇಲಾಖೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಮಾಜಿ ಸೈನಿಕರ ಪೈಕಿ ವೇತನ ನಿಗಧಿಪಡಿಸಲು ಬಾಕಿಯಿರುವವರ ಸಂಖ್ಯೆ ಎಷ್ಟು; ಈ ಸಂಬಂಧ ನ್ಯಾಯಾಲಯದಲ್ಲಿರುವ ಪ್ರಕರಣಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಪ್ರಕರಣದ ಸಂಕ್ಷಿಪ್ತ ಮಾಹಿತಿಯೊಂದಿಗೆ ಸಂಪೂರ್ಣ ವಿವರ ನೀಡುವುದು) | ಮಾಜಿ ಸೈನಿಕರ ಮೀಸಲಾತಿ ಅಡಿಯಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗೆ ನೇಮಕಗೊಂಡ ಎಲ್ಲಾ ಸಿಬ್ಬಂದಿಗಳಿಗೆ ಅವರು ನೇಮಕಗೊಂಡ ಕಾಲಿಕ ವೇತನ ಶ್ರೇಣಿಯ ಕನಿಷ್ಠ ಹಂತಕ್ಕೆ ವೇತನ ನಿಗದಿಪಡಿಸಿ, ತದನಂತರ ವೇತನ ಸಂರಕ್ಷಣೆ ಕೋರಿ ಸಿಬ್ಬಂದಿಗಳು ಸಲ್ಲಿಸುವ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು.<br>ಪ್ರಸ್ತುತ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಾಜಿ ಸೈನಿಕರ ಪೈಕಿ ಕೆಲವು ಸಿಬ್ಬಂದಿಗಳು ವೇತನ ಸಂರಕ್ಷಣೆ ಕೋರಿ ಅರ್ಜಿ ಸಲ್ಲಿಸದ ಕಾರಣ ಮತ್ತು ವಿವಿಧ ನ್ಯಾಯಾಲಯಗಳಲ್ಲಿ ಪ್ರಕರಣಗಳು ದಾಖಲಾಗಿರುವುದರಿಂದ 673 ಪ್ರಕರಣಗಳು ವೇತನ ನಿಗದಿಪಡಿಸಲು ಬಾಕಿ ಇರುತ್ತದೆ (ಅನುಬಂಧ-ಬಿ). ಅದರಲ್ಲಿ ವಿವಿಧ ನ್ಯಾಯಾಲಯಗಳಲ್ಲಿ 102 ಪ್ರಕರಣಗಳು ವಿಚಾರಣೆಯಲ್ಲಿರುತ್ತವೆ. |

**ಒಇ 178 ಪಿಸಿಎಸ್ 2023**

(ಪ್ರಿಯಾಂಕ್ ಖರ್ಗೆ)
ಗೃಹ ಸಚಿವರು